

ಕುಟುಂಬದೊಂದಿಗೆ ತರಾಸು

ಪುಟ್ಟಣ್ಣನವರೇ 'ಹೀರೊ'. ವಿಷ್ಣು, ಅಂಬಿ, ಆರತಿ ಇವರೆಲ್ಲಾ ಹೊಸ ಚಿಗುರುಗಳು. ಆದರೂ ಚಿತ್ರ ಹಿಟ್ ಆಯಿತು. ಆದರೆ, ಮುನಿದ ತ.ರಾ.ಸು. ಇದು 'ನಾಗರಹಾವಲ್ಲ ಕೇರೆಹಾವು' ಎಂದು ಗೇಲಿಮಾಡಿ ಪತ್ರಿಕೆಗಳಿಗೆ ಬರೆದರು. ಇದಕ್ಕೆ ಕಾರಣವಿಲ್ಲದಿರಲಿಲ್ಲ. ಪುಟ್ಟಣ್ಣನವರಿಗೆ ಸ್ವಪ್ರತಿಷ್ಠೆ ಅಧಿಕ. ನಾನು ತ.ರಾ.ಸು.ವಿನ ಮೂರು ಕಾದಂಬರಿಗಳನ್ನು ಓದಿ ಪಕ್ಕಕಿಟ್ಟು ಅದ್ಭುತವಾದ ಚಿತ್ರಕಥೆ ಮಾಡಿದ್ದೇನೆ ಎಂದೆಲ್ಲ ಹೇಳಿಕೊಂಡಿದ್ದು ಪತ್ರಿಕೆಗಳಲ್ಲಿ ಬಂದಿತ್ತು. ಅದು ನಿಜ ಕೂಡ. ಪುಟ್ಟಣ್ಣನವರು ಹೈಸ್ಕೂಲ್ ಹುಡುಗನನ್ನು ಕಾಲೇಜ್ ಹೀರೊ ಮಾಡಿ 'ಲವ್ ಸ್ಟೋರಿ' ಟಚ್ ಕೊಟ್ಟಿದ್ದರು. ಚಾಮಯ್ಯ ಮೇಷ್ಟ್ರ ಪಾತ್ರ ಬೆಳೆಸಿದ್ದರು. ಮಾರ್ಗರೇಟ್ ಪಾತ್ರಕ್ಕೆ ಲವ್ಲಿ ಟಚ್ ನೀಡಿ ಕಾಮಿಡಿ, ಟ್ರಾಜಿಡಿ ಹದವಾಗಿ ಮಿಕ್ಸ್ ಮಾಡಿದ್ದರು. ಆದರೆ, ಸ್ವಾಭಿಮಾನಿ ತ.ರಾ.ಸು. ಮುನಿದಿದ್ದರು—ನನ್ನ ಕಥೆಯೇ ಅಲ್ಲವೆಂದು ದುಡುಕಿಯೂ ಬಿಟ್ಟರು. ಚಿತ್ರ ಮಾತ್ರ ಹಿಟ್ ಆಯಿತು. ನಾಲ್ಕು ಭಾಷೆಗಳಿಗೆ ರಿಮೇಕ್ ಆಯಿತು. ಇದರಿಂದಾಗಿ ತ.ರಾ.ಸು. ಕೃತಿಗಳಿಗೆ 'ಸ್ಟಾರ್ ವ್ಯಾಲ್ಯೂ' ಬಂತು. ಖ್ಯಾತ ನಿರ್ದೇಶಕ ಜೋಡಿ ದೊರೆ—ಭಗವಾನ್, ತ.ರಾ.ಸು. ಕಾದಂಬರಿಗಳನ್ನು ಗುಡ್ಡೆ ಹಾಕಿಕೊಂಡು ಓದಿದರು. 'ಚಂದನದ ಗೊಂಬೆ' ಎತ್ತಿಕೊಂಡು ಅನಂತನಾಗ್, ಲಕ್ಷ್ಮಿ ಜೋಡಿ ಹಾಕಿಕೊಂಡು ಕನ್ನಡಿಗರನ್ನು ಮೋಡಿಮಾಡಿದರು. ರಾಜನ್—ನಾಗೇಂದ್ರರ ಸೊಗಸಾದ ಹಾಡುಗಳು ಬೇರೆ. ಅನಂತರ 'ಗಾಳಿಮಾತು' ಕೂಡ ಸ್ತ್ರೀ ಪ್ರಧಾನ ಚಿತ್ರ. 'ಬೆಂಕಿಯ ಬಲೆ' ಬ್ರಾಹ್ಮಣ ಕುಟುಂಬಗಳ ಬಡತನ, ಸಣ್ಣತನ, ಒಳಜಗಳ, ಕಿತಾಪತಿ, ಸ್ತ್ರೀಶೋಷಣೆ, ನೋವು ನಲಿವುಗಳ ಮಿಶ್ರಣವಾಗಿತ್ತು. ತ.ರಾ.ಸು. ತಾವು ಕಂಡುಂಡುದ್ದನ್ನೇ ಕಣ್ಣೀರ ಕಾದಂಬರಿಗಳನ್ನಾಗಿ ನೇಯ್ದಿದ್ದರು. ದೊರೆ—ಭಗವಾನ್ ಸಹ ಮಹಿಳಾ ಪ್ರೇಕ್ಷಕರ ಮನ ಗೆದ್ದರು. ಮತ್ತೆ ತ.ರಾ.ಸು. ಅವರ 'ಬಿಡುಗಡೆಯ ಬೇಡಿ' ಕೃತಿಯನ್ನು ಮತ್ತದೇ ನಿರ್ದೇಶಕ ಜೋಡಿ ಕೈಗೆತ್ತಿಕೊಂಡಿತು.